# ಅಡಗಿಕೊಳ್ಳದಿದ್ದರೆ ಮೂಲಭೂತವಾದಿಗಳು ಕೊಲ್ಲುತ್ತಾರೆ...





## ಬಾಂಗ್ಲಾದೇಶಿ ಬ್ಲಾಗರ್ ಸ್ವಗತ

ಯುದ್ಧಾಪರಾಧಿಗಳ ವಿರುದ್ಧ 2013ರಲ್ಲಿ ಗಣ ಜಾಗರಣ ಮಂಚ್ ಆರಂಭವಾಯಿತು. ಯುದ್ಧಾಪರಾಧಿಗಳನ್ನು ವಿಚಾರಣೆಗೊಳಪಡಿಸಲಾಗಿತ್ತು ಆದರೆ ಗಲ್ಲಿಗೇರಿಸಲಿಲ್ಲ. ಇವರನ್ನು ಗಲ್ಲಿಗೇರಿಸಬೇಕೆಂಬುದು ನಮ್ಮ ಆಗ್ರಹ. ಯಾಕೆಂದರೆ ಇವರೆಲ್ಲರೂ ಜಮಾತ್ ಎ ಇಸ್ಲಾಮ್‌ನ ಬೆಂಬಲಿಗರಾಗಿದ್ದು, ಜಮಾತ್ ಸರ್ಕಾರ ಬಂದಕೂಡಲೆ ಇವೆರಲ್ಲ ಬಿಡುಗಡೆಯಾಗುವವರು. ಈ ಎಲ್ಲ ಪ್ರತಿಭಟನೆ ಪ್ರದರ್ಶನಗಳ ನಡುವೆ ತಾಬಾ ಬಾಬಾ ಎಂಬ ಹೆಸರಿನಲ್ಲಿ ಬರೆಯುತ್ತಿದ್ದ ರಾಜಿಬ್ ಹೈದರ್ ಹತ್ಯೆಗೀಡಾದರು. ಅವರನ್ನು ದಾರುಣವಾಗಿ ಕೊಲ್ಲಲಾಯಿತು. ಹೆಫಾಜತ್-ಎ-ಇಸ್ಲಾಮ್ ಎಂಬ ಹೆಸರಿನ ಸಂಘಟನೆಯ ಆಗ್ರಹ ಒಂದೇ, ಎಲ್ಲ ನಾಸ್ತಿಕರನ್ನು ಕೊಲ್ಲಬೇಕು. ಹಾಗೆ ಫೇಸ್‌ಬುಕ್‌ನಲ್ಲಿ ಅವರು ಬಹಿರಂಗವಾಗಿ ಬರೆದುಕೊಂಡಿದ್ದಾರೆ. ನಾವಂದುಕೊಂಡಂತೆ ಈ ಸಂಘಟನೆಯ ಬೆಳವಣಿಗೆಯ ಹಿಂದೆ ಆವಾಮಿ ಲೀಗ್ ಇದೆ. ಗಣ ಜಾಗರಣ ಮಂಚ್‌ಗೇ ಸೇರಿದವರೆಲ್ಲ ನಾಸ್ತಿಕರು ಮತ್ತು ನಾಸ್ತಿಕರು ಯಾರೂ ದೇಶದಲ್ಲಿ ಇರಬಾರದು ಎಂದು ಅವರು ಆರಂಭದಲ್ಲೇ ಹೇಳುತ್ತ ಬಂದಿದ್ದಾರೆ. ಇಸ್ಲಾಂ ಮೂಲಭೂತವಾದಿಗಳು ನನ್ನನ್ನು ಬೆದರಿಸುತ್ತಿದ್ದರು. ನನಗೆ ಕರೆ ಮಾಡಿ ಒಂದೋ ನೀನು